30/1

# 2006

## MANAGEMENT

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

SEAL

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

*4×5=20*

*Answer each question in about 50 words. Each question carries 5 marks.*

**1.** (a) What is the "Mission" of an organisation ?

(b) Explain the concept of 'Theory X' and 'Theory Y'.

(c) What is 'Elasticity of demand' ?

(d) State the fields of application of statistical analysis.

**ಭಾಗ A** *4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) 'ಸಂಸ್ಥೆಯ ಧ್ಯೇಯೋದ್ದೇಶ' ಎಂದರೇನು ?

(ಬಿ) 'X ಸಿದ್ಧಾಂತ' ಮತ್ತು 'Y ಸಿದ್ಧಾಂತ'ದ ಪರಿಕಲ್ಪನೆಯನ್ನು ವಿವರಿಸಿ.

(ಸಿ) 'ಬೇಡಿಕೆಯ ಸ್ಥಿತಿಸ್ಥಾಪಕತ್ವ' ಎಂದರೇನು ?

(ಡಿ) ಸಾಂಖ್ಯಿಕ ವಿಶ್ಲೇಷಣೆಯನ್ನು ಅನ್ವಯಿಸುವ ಕ್ಷೇತ್ರಗಳನ್ನು ತಿಳಿಸಿ.

## PART B

*10×10=100*

*Answer each question in about 100 words. Each question carries 10 marks.*

**2.** Explain the key bases of departmentation.

**3.** What is 'Organisational control' ? Explain the need for control.

**4.** Give a set of guidelines to promote job satisfaction among the employees of an organisation.

**5.** Describe Need Hierarchy theories of motivation.

**6.** How is market competition classified for economic analysis ? Explain.

**7.** What are the important issues in Indian Public Sector pricing ?

**8.** Explain the utility of 'Time series analysis'.

**9.** What is 'Delegation' ? Explain the principles of delegation.

**10.** Illustrate the use of linear programming in business and industry.

**11.** What is 'Charismatic leadership' ? Explain the key characteristics of charismatic leaders.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಇಲಾಖೀಕರಣದ ಮುಖ್ಯ ಆಧಾರಗಳನ್ನು ವಿವರಿಸಿ.

**3.** 'ಸಾಂಖ್ಯಿಕ ನಿಯಂತ್ರಣ' ಎಂದರೇನು ? ನಿಯಂತ್ರಣದ ಅಗತ್ಯವನ್ನು ವಿವರಿಸಿ.

**4.** ಒಂದು ಸಂಸ್ಥೆಯ ಉದ್ಯೋಗಿಗಳಲ್ಲಿ ಉದ್ಯೋಗ ತೃಪ್ತಿಯನ್ನು ಹೆಚ್ಚು ಮಾಡಲು ಕೆಲವು ಮಾರ್ಗದರ್ಶಿ ಸೂತ್ರಗಳನ್ನು ತಿಳಿಸಿ.

**5.** ಅಭಿಪ್ರೇರಣೆಯ ಅನುಕ್ರಮ ಶ್ರೇಣಿ ಅಗತ್ಯತಾ ಸಿದ್ಧಾಂತಗಳನ್ನು ವಿವರಿಸಿ.

**6.** ಆರ್ಥಿಕ ವಿಶ್ಲೇಷಣೆಗಾಗಿ ಮಾರುಕಟ್ಟೆ ಪೈಪೋಟಿಯನ್ನು ಹೇಗೆ ವರ್ಗೀಕರಿಸಲಾಗುತ್ತದೆ ? ವಿವರಿಸಿ.

**7.** ಭಾರತದ ಸಾರ್ವಜನಿಕ ಕ್ಷೇತ್ರದ ಬೆಲೆ ನಿರ್ಣಯದ ಪ್ರಮುಖ ಅಂಶಗಳು ಯಾವುವು ?

**8.** ಕಾಲಸರಣಿ ವಿಶ್ಲೇಷಣೆಯ ಉಪಯುಕ್ತತೆಯನ್ನು ವಿವರಿಸಿ.

**9.** 'ನಿಯೋಜನೆ' ಎಂದರೇನು ? ನಿಯೋಜನೆಯ ತತ್ವಗಳನ್ನು ವಿವರಿಸಿ.

**10.** ವ್ಯಾಪಾರೋದ್ಯಮ ಹಾಗೂ ಕೈಗಾರಿಕೆಗಳಲ್ಲಿ ರೇಖಾತ್ಮಕ ಕಾರ್ಯಕ್ರಮ ಯೋಜನೆಯ ಉಪಯೋಗವನ್ನು ವಿವರಿಸಿ.

**11.** 'ವರ್ಚಸ್ವೀ ನಾಯಕತ್ವ' ಎಂದರೇನು ? ವರ್ಚಸ್ವೀ ನಾಯಕರ ಮುಖ್ಯ ವಿಶಿಷ್ಟತೆಗಳನ್ನು ವಿವರಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** What is 'Decision making' ? How are decisions made ?

**13.** What is 'Organisational change' ? List and explain organisational barriers to change.

**14.** There are many factors that determine cost behaviour. In different firms, there are different factors that affect costs. Attempt to arrive at some general determinants of costs.

**15.** Fit a straight-line trend by the method of least squares to the following data. Determine the profit for the year 2005.

| Year | 1997 | 1998 | 1999 | 2000 | 2001 | 2002 | 2003 | 2004 |
|---|---|---|---|---|---|---|---|---|
| Profit (Rs. lakhs) | 38 | 40 | 65 | 72 | 69 | 60 | 87 | 95 |

**16.** Synchronizing and unifying the actions of people is coordination. Examine the principles of coordination.

**17.** There are a number of inter-personal and intra-personal barriers that help to explain why the message that is decoded by a receiver is often different from that which the sender intended. Review some of the more prominent barriers to effective communication.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** "ನಿರ್ಣಯ ಕೈಗೊಳ್ಳುವುದು" ಎಂದರೇನು ? ನಿರ್ಣಯಗಳನ್ನು ಹೇಗೆ ಮಾಡುತ್ತಾರೆ ?

**13.** 'ಸಾಂಸ್ಥಿಕ ಬದಲಾವಣೆ' ಎಂದರೇನು ? ಸಂಸ್ಥೆ ವ್ಯವಸ್ಥೆಯಲ್ಲಿ ಬದಲಾವಣೆಗಳಿಗೆ ಇರುವ ಅಡ್ಡಿಗಳನ್ನು ಪಟ್ಟಿಮಾಡಿ ಮತ್ತು ವಿವರಿಸಿ.

**14.** ವೆಚ್ಚ ವರ್ತನೆಯನ್ನು ನಿರ್ಣಯಿಸುವ ಅನೇಕ ಅಂಶಗಳಿವೆ. ಬೇರೆ ಬೇರೆ ರೀತಿಯ ಉದ್ಯಮಗಳಲ್ಲಿ ವೆಚ್ಚದ ಮೇಲೆ ಪರಿಣಾಮ ಬೀರುವ ಅಂಶಗಳು ಬೇರೆ ಬೇರೆ ರೀತಿಯಾಗಿರುತ್ತವೆ. ಕೆಲವು ಸಾಮಾನ್ಯ ವೆಚ್ಚ ನಿರ್ಧಾರಕಗಳನ್ನು ತಿಳಿಸಿ.

**15.** ಕೆಳಗಿನ ದತ್ತಾಂಶಗಳಿಗೆ ಕನಿಷ್ಠ ವರ್ಗಗಳ ವಿಧಾನದಲ್ಲಿ ಒಂದು ಸರಳರೇಖಾ ಪ್ರವೃತ್ತಿಯನ್ನು ರೂಪಿಸಿ, 2005 ರ ಸಾಲಿನ ಲಾಭವನ್ನು ನಿರ್ಣಯಿಸಿ.

| ವರ್ಷ | 1997 | 1998 | 1999 | 2000 | 2001 | 2002 | 2003 | 2004 |
|---|---|---|---|---|---|---|---|---|
| ಲಾಭ (ಲಕ್ಷ ರೂ.ಗಳಲ್ಲಿ) | 38 | 40 | 65 | 72 | 69 | 60 | 87 | 95 |

**16.** ಜನರ ಕ್ರಿಯೆಗಳನ್ನು ಸಂಯೋಜಿಸುವುದು ಮತ್ತು ಏಕೀಭವಿಸುವುದರ ಸಮನ್ವಯದ ತತ್ವಗಳು ಯಾವುವು ? ವಿವರಿಸಿ.

**17.** ಒಂದು ಸಂದೇಶವನ್ನು ನೀಡಿದಾತನು ಉದ್ದೇಶಿಸಿದ ಅರ್ಥಕ್ಕಿಂತ ಅದನ್ನು ಸ್ವೀಕರಿಸಿದಾತನು ಅದನ್ನು ಬಿಡಿಸಿ ಅರ್ಥ ಮಾಡಿಕೊಂಡ ರೀತಿ ಯಾಕೆ ಭಿನ್ನವಾಗಿರುತ್ತದೆ ಎಂಬುದನ್ನು ವಿವರಿಸಲು ಸಹಾಯಕವಾದ ಅನೇಕ ಅಂತರ ವ್ಯಕ್ತಿ ಹಾಗೂ ವ್ಯಕ್ತಿ ಅಂತರ್ಗತ ಅಡಚಣೆಗಳಿವೆ. ಒಂದು ಸಮರ್ಥ ಸಂವಹನಕ್ಕೆ ಬಹು ಮುಖ್ಯವಾದ ಅಡ್ಡಿಗಳು ಯಾವುವು ಎಂಬುದನ್ನು ಪರಿಶೀಲಿಸಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** What is 'Conflict' and 'Conflict management' ? Elucidate conflict management techniques.

**19.** Globalisation has completely transformed the way Indian businesses used to operate. What should be the strategies to overcome some of the challenges of globalisation into opportunities ? — Elucidate.

**20.** "People who know their emotions and are good at reading other's emotions may be more effective in their jobs. This leads to emotional intelligence." — What is 'Emotional intelligence' and what are its key components ?

**21.** What is 'Decision making under uncertainty' ? What are the decision criteria used for decision making under uncertainty ? Illustrate.

**22.** Examine the structure of Management Information System.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** 'ಸಂಘರ್ಷ' ಮತ್ತು 'ಸಂಘರ್ಷದ ನಿರ್ವಹಣೆ' ಎಂದರೇನು ? ಸಂಘರ್ಷ ನಿರ್ವಹಣೆಯ ವಿಧಾನಗಳನ್ನು ನಿರೂಪಿಸಿ.

**19.** ಜಾಗತೀಕರಣವು, ಭಾರತೀಯ ವ್ಯಾಪಾರೋದ್ಯಮ ಕಾರ್ಯ ನಿರ್ವಹಿಸುತ್ತಿದ್ದ ರೀತಿಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. ಜಾಗತೀಕರಣವು ಅವಕಾಶಗಳಿಗೆ ಒಡ್ಡಿರುವ ಕೆಲವೊಂದು ಸವಾಲುಗಳನ್ನು ನಿವಾರಿಸಲು ಯಾವ ತಂತ್ರೋಪಾಯಗಳನ್ನು ಅನುಸರಿಸಬೇಕಾಗಿದೆ ? ವಿವರಿಸಿ.

**20.** "ತಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡಿರುವ ಹಾಗೂ ಇನ್ನೊಬ್ಬರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಸಮರ್ಥರಾಗಿರುವಂಥವರು ತಮ್ಮ ಕಾರ್ಯಗಳಲ್ಲಿ ಹೆಚ್ಚು ಸಮರ್ಥರಾಗಿರುತ್ತಾರೆ. ಇದು ಭಾವನಾತ್ಮಕ ಬುದ್ಧಿಶಕ್ತಿಗೆ ಕಾರಣವಾಗುತ್ತದೆ." — 'ಭಾವನಾತ್ಮಕ ಬುದ್ಧಿಶಕ್ತಿ' ಎಂದರೇನು ? ಇದರ ಮುಖ್ಯ ಅಂಶಗಳು ಯಾವುವು ?

**21.** 'ಅನಿಶ್ಚಿತ ಪರಿಸ್ಥಿತಿಯಲ್ಲಿ ನಿರ್ಣಯ ಕೈಗೊಳ್ಳುವುದು' ಎಂದರೇನು ? ಅನಿಶ್ಚಯ ಪರಿಸ್ಥಿತಿಯಲ್ಲಿ ನಿರ್ಣಯ ಕೈಗೊಳ್ಳಲು ಬಳಸಲಾಗುವ ನಿರ್ಣಯ ಮಾನದಂಡಗಳು ಯಾವುವು ? ಉದಾಹರಣೆಗಳೊಂದಿಗೆ ತಿಳಿಸಿ.

**22.** ವ್ಯವಸ್ಥಾಪನ ಮಾಹಿತಿ ವ್ಯವಸ್ಥೆಯ ರಚನೆಯನ್ನು ನಿರೂಪಿಸಿ.

# 2006

## MANAGEMENT

### Paper 2

*Time : 3 Hours ]* *[ Maximum Marks : 300*

---

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

**1.** (a) What is 'Customer Relationship Marketing' ?

(b) What is 'Human Resource Planning' ?

(c) What are the attributes of a good manufacturing system that aims to fulfil customer demands ?

(d) What are 'Ratios' ? What are the advantages of ratio analysis ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) 'ಗ್ರಾಹಕ ಸಂಬಂಧ ಮಾರಾಟ ವ್ಯವಸ್ಥೆ' ಎಂದರೇನು ?

(ಬಿ) 'ಮಾನವ ಸಂಪನ್ಮೂಲ ಯೋಜನೆ' ಎಂದರೇನು ?

(ಸಿ) ಗ್ರಾಹಕರ ಬೇಡಿಕೆಗಳನ್ನು ಈಡೇರಿಸುವ ಉದ್ದೇಶವುಳ್ಳ ಒಂದು ಉತ್ತಮ ತಯಾರಿಕಾ ವ್ಯವಸ್ಥೆಯ ಗುಣಗಳು ಯಾವುವು ?

(ಡಿ) 'ಅನುಪಾತಗಳು' ಎಂದರೇನು ? ಅನುಪಾತ ವಿಶ್ಲೇಷಣೆಯ ಅನುಕೂಲಗಳು ಯಾವುವು ?

## PART B

*10×10=100*

*Answer each question in about 100 words. Each question carries 10 marks.*

**2.** What is 'Career anchor' ? Identify a few career anchors.

**3.** "Marketers must consider each family as a decision-making unit and determine the locus of family authority, particularly in selling household goods." — How do these family units play an important role ?

**4.** Identify the events that form part of the operating cycle in a manufacturing company and explain them.

**5.** What is 'Process planning' ? What are the tasks managed generally in process planning ?

**6.** What is 'Capital structure' ? What is 'Financial structure' ? In case of a new company, what could be the pattern of the capital structure ?

**7.** Elucidate the factors that affect the forecasting of products.

**8.** What are the psychological factors that influence a person's buying choices ?

**9.** Provide an overview of the situational/environmental factors that influence the selection and recruitment process.

**10.** What are the factors that affect the Dividend policy of a company ?

**11.** What is 'Value analysis' ? When should companies attempt to apply value analysis ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** 'ಜೀವನೋಪಾಯ ಅವಲಂಬನ' ಎಂದರೇನು ? ಕೆಲವು ಜೀವನೋಪಾಯ ಅವಲಂಬನಗಳನ್ನು ಗುರುತಿಸಿ.

**3.** "ಮಾರಾಟಗಾರರು ನಿರ್ಧಾರ ಕೈಗೊಳ್ಳುವ ಪ್ರತಿಯೊಂದು ಕುಟುಂಬವನ್ನು ಘಟಕವಾಗಿ ಪರಿಗಣಿಸಬೇಕು ಮತ್ತು ಕುಟುಂಬದ ಯಜಮಾನಿಕೆ ಯಾರಲ್ಲಿದೆ ಎಂಬುದನ್ನು ನಿರ್ಧರಿಸಬೇಕು; ವಿಶೇಷವಾಗಿ ಗೃಹೋಪಯೋಗಿ ವಸ್ತುಗಳ ಮಾರಾಟದಲ್ಲಿ ಈ ಅಂಶ ಮುಖ್ಯ." — ಈ ಕುಟುಂಬ ಘಟಕಗಳು ಯಾವ ರೀತಿ ಬಹುಮುಖ್ಯ ಪಾತ್ರ ವಹಿಸುತ್ತವೆ ?

**4.** ಒಂದು ತಯಾರಿಕಾ ಕಂಪನಿಯಲ್ಲಿ, ಅದರ ಕಾರ್ಯಾಚರಣಾ ಆವರ್ತದ ಅಂಗವಾಗಿರುವಂಥ ಘಟ್ಟಗಳು ಯಾವುವು ? ಅವುಗಳನ್ನು ವಿವರಿಸಿ.

**5.** 'ಪ್ರಕ್ರಿಯಾ ಯೋಜನೆ' ಎಂದರೇನು ? ಸಾಮಾನ್ಯವಾಗಿ ಪ್ರಕ್ರಿಯಾ ಯೋಜನೆಯಲ್ಲಿ ನಿರ್ವಹಿಸಲಾಗುವ ಅಭಿರುಚಿಗಳು ಯಾವುವು ?

**6.** 'ಬಂಡವಾಳ ರಚನೆ' ಎಂದರೇನು ? 'ಹಣಕಾಸಿನ ರಚನೆ' ಎಂದರೇನು ? ಒಂದು ಹೊಸದಾದ ಕಂಪನಿಯಲ್ಲಿ ಅದರ ಬಂಡವಾಳ ರಚನೆಯ ವಿನ್ಯಾಸ ಹೇಗಿರುತ್ತದೆ ?

**7.** ಉತ್ಪನ್ನಗಳ ಪೂರ್ವ ಅಂದಾಜಿನ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ? ವಿವರಿಸಿ.

**8.** ಒಬ್ಬ ವ್ಯಕ್ತಿಯು ಯಾವುದನ್ನು ಕೊಳ್ಳಬೇಕು ಎಂದು ಆಯ್ಕೆಮಾಡಿಕೊಳ್ಳುವುದರ ಮೇಲೆ ಪರಿಣಾಮ ಬೀರುವ ಮಾನಸಿಕ ಅಂಶಗಳು ಯಾವುವು ?

**9.** ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವ ಸಂದರ್ಭಸ್ಥಿತಿ/ಸನ್ನಿವೇಶಾತ್ಮಕ ಅಂಶಗಳ ಬಗ್ಗೆ ಒಂದು ಸಮಗ್ರ ನೋಟ ಕೊಡಿ.

**10.** ಒಂದು ಸಂಸ್ಥೆಯ ಲಾಭಾಂಶ ನೀತಿಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

**11.** 'ಮೌಲ್ಯ ವಿಶ್ಲೇಷಣೆ' ಎಂದರೇನು ? ಕಂಪನಿಗಳು ಮೌಲ್ಯ ವಿಶ್ಲೇಷಣೆಯನ್ನು ಬಳಸುವ ಪ್ರಯತ್ನ ಯಾವಾಗ ಮಾಡುತ್ತವೆ ?

## PART C

*6×15=90*

*Answer each question in about 150 words. Each question carries 15 marks.*

**12.** What is 'Segmentation' ? Explain the bases for segmenting consumer markets.

**13.** What is 'Layout planning' ? Elucidate the objectives of plant layout.

**14.** "Performance appraisal could be taken either for evaluation or for developing employees." — Explain why organisations assess performance of employees.

**15.** HRD is needed for any organisation that wants to grow continuously, leading to several outcomes. List and explain the HRD outcomes.

**16.** What is 'Working capital' ? What factors determine the working capital requirements of a company ?

**17.** The following are the details regarding the operations of a firm during a period of 12 months :

| | |
|---|---|
| Sales : | Rs. 12,00,000 |
| Selling price/unit : | Rs. 10 |
| Variable cost/unit : | Rs. 7 |
| Total cost/unit : | Rs. 9 |

Credit period allowed to customers — One month.

The firm is considering a proposal for increasing the collection period from one month to two months. The relaxation is expected to increase sales by 25% from its existing level. If the firm's required return on investment is 25%, advise the firm.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** 'ವಿಭಾಗೀಕರಣ' ಎಂದರೇನು ? ಗ್ರಾಹಕರ ಮಾರುಕಟ್ಟೆಗಳನ್ನು ವಿಭಾಗೀಕರಿಸುವುದಕ್ಕೆ ಆಧಾರಗಳೇನು ? ವಿವರಿಸಿ.

**13.** 'ಸ್ಥಳವಿನ್ಯಾಸ ಯೋಜನೆ' ಎಂದರೇನು ? ಸ್ಥಾವರದ ಸ್ಥಳವಿನ್ಯಾಸದ ಉದ್ದೇಶಗಳೇನು ? ನಿರೂಪಿಸಿ.

**14.** "ಕಾರ್ಯನಿರ್ವಹಣೆಯ ಅಂದಾಜು ನಿರ್ಣಯವನ್ನು ಮೌಲ್ಯಮಾಪನಕ್ಕಾದರೂ ಬಳಸಬಹುದು ಅಥವಾ ಉದ್ಯೋಗಿಗಳ ಅಭಿವೃದ್ಧಿಗಾದರೂ ಬಳಸಬಹುದು." — ಸಂಸ್ಥೆಗಳಲ್ಲಿ ಉದ್ಯೋಗಿಗಳ ನಿರ್ವಹಣೆಯ ಮೌಲ್ಯ ನಿರ್ಧಾರಣವನ್ನು ಯಾರು ಮಾಡುತ್ತಾರೆ ? ವಿವರಿಸಿ.

**15.** ಒಂದು ಸಂಸ್ಥೆಯು ನಿರಂತರವಾಗಿ ಬೆಳೆಯುತ್ತ ಅನೇಕ ಉತ್ತಮ ಫಲಗಳನ್ನು ಪಡೆಯಬೇಕಾದರೆ ಅದಕ್ಕೆ ಮಾನವ ಸಂಪನ್ಮೂಲ ಅಭಿವೃದ್ಧಿ ಬಹಳ ಅಗತ್ಯ. ಮಾನವ ಸಂಪನ್ಮೂಲ ಅಭಿವೃದ್ಧಿಯಿಂದ ದೊರೆಯುವ ಫಲಗಳು ಯಾವುವು ಎಂಬುದನ್ನು ತಿಳಿಸಿ ಮತ್ತು ವಿವರಿಸಿ.

**16.** 'ಕಾರ್ಯ ಬಂಡವಾಳ' ಎಂದರೇನು ? ಒಂದು ಸಂಸ್ಥೆಯ ಕಾರ್ಯ ಬಂಡವಾಳದ ಅಗತ್ಯತೆಗಳನ್ನು ನಿರ್ಧರಿಸುವ ಅಂಶಗಳು ಯಾವುವು ?

**17.** ಈ ಕೆಳಗೆ ಒಂದು ಉದ್ಯಮವು 12 ತಿಂಗಳುಗಳ ಅವಧಿಯಲ್ಲಿ ನಡೆಸಿದ ಕಾರ್ಯಾಚರಣೆಗಳ ವಿವರಗಳನ್ನು ಕೊಡಲಾಗಿದೆ :

| | |
|---|---|
| ಮಾರಾಟಗಳು | 12,00,000 ರೂ. |
| ಪ್ರತಿ ಘಟಕದ ಮಾರಾಟ ಬೆಲೆ | 10 ರೂ. |
| ಪ್ರತಿ ಘಟಕದ ವ್ಯತ್ಯಾಸೀ ವೆಚ್ಚ | 7 ರೂ. |
| ಒಟ್ಟು ವೆಚ್ಚ/ಘಟಕ | 9 ರೂ. |
| ಗ್ರಾಹಕರಿಗೆ ನೀಡಿದ ಸಾಲ ಅವಕಾಶದ ಅವಧಿ | ಒಂದು ತಿಂಗಳು |

ಉದ್ಯಮವು, ಸಾಲ ವಸೂಲಾತಿಯ ಅವಧಿಯನ್ನು ಒಂದು ತಿಂಗಳಿನಿಂದ ಎರಡು ತಿಂಗಳಿಗೆ ಹೆಚ್ಚಿಸುವ ಪ್ರಸ್ತಾಪವನ್ನು ಪರಿಶೀಲಿಸುತ್ತದೆ.

ಬದಲಾಯಿತಿಯಿಂದಾಗಿ ಮಾರಾಟಗಳ ಮಟ್ಟ ಈಗಿನದಕ್ಕಿಂತ 25% ಹೆಚ್ಚಾಗುವುದೆಂದು ನಿರೀಕ್ಷಿಸಲಾಗಿದೆ. ಸಂಸ್ಥೆಯು ಹೂಡಿರುವ ಬಂಡವಾಳಕ್ಕೆ 25% ಹುಟ್ಟುವಳಿ ಬರುವುದು ಅಗತ್ಯವಾಗಿದ್ದರೆ, ಸಂಸ್ಥೆ ಏನು ಮಾಡಬಹುದು ಎಂಬ ಬಗ್ಗೆ ಸಲಹೆಕೊಡಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** What factors does a firm have to consider in setting its pricing policy ? Explain.

**19.** Classify the components of 'Integrated materials management function' in modules and explain them with illustrations.

**20.** An increasingly litigious work-force makes it necessary for employers to institute a proper grievance procedure. Identify the causes for grievance and its effects and suggest suitable steps in grievance procedure.

**21.** The annual demand of a product is 12,000 units. The ordering cost is Rs. 100 and carrying cost per unit per year is 20% of purchase price per unit. The purchase price per unit is Rs. 50. Find the economic order quantity, number of orders per year and the time between successive orders.

**22.** What are the characteristics of a good investment evaluation criterion ? Also, state a few criteria in use for the above purpose.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಒಂದು ಉದ್ಯಮವು ತನ್ನ ಬೆಲೆ ನಿರ್ಧಾರ ನೀತಿಯನ್ನು ರೂಪಿಸುವಾಗ ಯಾವ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ? ವಿವರಿಸಿ.

**19.** ಮಾಡ್ಯೂಲ್‌ಗಳಲ್ಲಿ, ಸಂಘಟಿತ ಸಾಮಗ್ರಿ ನಿರ್ವಹಣಾ ಕಾರ್ಯದ ಅಂಗಗಳನ್ನು ವರ್ಗೀಕರಿಸಿ, ಅವುಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

**20.** ಕಾರ್ಮಿಕ ದಳದ ಬೆಳೆಯುತ್ತಿರುವ ಮೊಕದ್ದಮೆಬಾಜಿ ಅಭಿವೃತ್ತಿಯಿಂದಾಗಿ ಉದ್ಯೋಗದಾತರು ಒಂದು ಸಮರ್ಪಕವಾದ ಅಸಂತೋಷ (Grievance) ತೀರಿಕೆ ವಿಧಾನವನ್ನು ರೂಪಿಸುವುದು ಅಗತ್ಯವಾಗುತ್ತದೆ. ಅಸಂತೋಷಕ್ಕೆ ಕಾರಣಗಳೇನು ಮತ್ತು ಅದರ ಪರಿಣಾಮಗಳೇನು ಎಂಬುದನ್ನು ತಿಳಿಸಿ ಮತ್ತು ಅಸಂತೋಷ ತೀರಿಕೆ ವಿಧಾನದಲ್ಲಿರಬೇಕಾದ ಸೂಕ್ತ ಕ್ರಮಗಳನ್ನು ಸೂಚಿಸಿ.

**21.** ಒಂದು ಉತ್ಪನ್ನದ ವಾರ್ಷಿಕ ಬೇಡಿಕೆ 12,000 ಘಟಕಗಳು. ಆದೇಶ ನೀಡಿಕೆ ವೆಚ್ಚ 100 ರೂ. ಮತ್ತು ಒಂದು ವರ್ಷಕ್ಕೆ ಒಂದು ಘಟಕದ ನಿರ್ವಹಣಾ ವೆಚ್ಚವು ಪ್ರತಿ ಘಟಕದ ಖರೀದಿ ಬೆಲೆಯ 20% ಆಗಿರುತ್ತದೆ. ಪ್ರತಿ ಘಟಕದ ಖರೀದಿ ಬೆಲೆ 50 ರೂ.ಗಳು. ಎಷ್ಟು ಪ್ರಮಾಣಕ್ಕೆ ಬೇಡಿಕೆ ಸಲ್ಲಿಸುವುದು ಮಿತವ್ಯಯಕಾರಿಯಾಗಿರುತ್ತದೆ ? ಪ್ರತಿ ವರ್ಷಕ್ಕೆ ಎಷ್ಟು ಸಲ ಆದೇಶ ಸಲ್ಲಿಸಬೇಕು ಮತ್ತು ಒಂದರ ನಂತರ ಮತ್ತೊಂದು ಆದೇಶ ನೀಡಿಕೆಯ ನಡುವೆ ಎಷ್ಟು ಕಾಲವಿರಬೇಕು ಎಂಬುದನ್ನು ಲೆಕ್ಕಹಾಕಿ.

**22.** ಒಂದು ಉತ್ತಮವಾದ ಹೂಡಿಕೆಯ ಮೌಲ್ಯಮಾಪನ ಅಳತೆಗೋಲಿನ ಲಕ್ಷಣಗಳು ಯಾವುವು ? ಈ ಉದ್ದೇಶಕ್ಕಾಗಿ ಬಳಕೆಯಲ್ಲಿರುವ ಕೆಲವು ಅಳತೆಗೋಲುಗಳ ಬಗ್ಗೆ ತಿಳಿಸಿ.